# ಸಿಪಿಸಿಆರ್‌ಐ: ಜೇನು ಕೃಷಿ ತರಬೇತಿ ಕಾರ್ಯಕ್ರಮ



ಕಾಸರಗೋಡು, ಮಾ. 6: ತಿರುವನಂತಪುರದ ರಾಜ್ಯ ತೋಟ ಗಾರಿಕಾ ಮಿಶನ್ ಹಾಗೂ ಸಿಪಿಸಿಆರ್‌ಐ ಕೃಷಿ ವಿಜ್ಞಾನ ಕೇಂದ್ರದ ನೇತೃತ್ವದಲ್ಲಿ 2 ದಿನಗಳ ಜೇನು ಕೃಷಿ ತರಬೇತಿ ಕಾರ್ಯಕ್ರಮ ಸಿಪಿಸಿಆರ್‌ಐಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆಯಿತು.

ಸಿಪಿಸಿಆರ್‌ಐ ಪ್ರಭಾರ ನಿರ್ದೇಶಕ ಡಾ। ರವಿ ಭಟ್ ಉದ್ಘಾಟಿಸಿದರು. ಜಿಲ್ಲಾ ಕೃಷಿ ಉಪನಿರ್ದೇಶಕ ತಿರುಮಲೇಶ್ವರ ಭಟ್ ಅಧ್ಯಕ್ಷತೆ ವಹಿಸಿದರು. ಮೂಲಮಟ್ಟಂ ಸೈಂಟ್ ಜೋಸೆಫ್ ಕಾಲೇಜಿನ ಪ್ರೊ। ಸಾಜನ್ ಜೋನ್, ವೆಳ್ಳಾನಿ ಕೃಷಿ ಕಾಲೇಜಿನ ಮುಖ್ಯಸ್ಥ ದೇವನೇಶನ್ ತರಗತಿ ನಡೆಸಿದರು. ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಘಟಕ ಡಾ। ಮನೋಜ್ ಕುಮಾರ್ ಸ್ವಾಗತಿಸಿದರು. ಚಾರ್ಲಿ ಮ್ಯಾಥ್ಯೂ, ಪಿ.ಎಂ. ಭಾಸ್ಕರನ್ ಶುಭಹಾರೈಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯ ತಾಂತ್ರಿಕ ಅಧಿಕಾರಿ ಡಾ। ಎಸ್. ಲೀಲಾ ವಂದಿಸಿದರು.